ಓ.ಎಸ್. ನಂ.370/2019
ಪ್ರಾಸಾ :02

ಸಾಕ್ಷಿಗೆ ಇಂದು ದಿನಾಂಕ 13/02/2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ. ಜಿ.ಎಸ್.ಜೆ. ವಕೀಲರಿಂದ : ಪ್ರತಿವಾದಿಗಳ ಪರವಾಗಿ :

1. ವಾದಿಯು ನನ್ನ ತಂದೆಯಾಗಬೇಕು. ನನ್ನ ತಂದೆಯು ಆರಾಮವಾಗಿದ್ದು, ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಜಮೀನಿನ ಕೆಲಸವನ್ನು ಸಹ ಮಾಡುತ್ತಿದ್ದಾರೆ ಎಂದರೆ ಸರಿ. ಅವರಿಗೆ ದೃಷ್ಟಿ ಮಾಂಧ್ಯತೆ ಇರುವ ಕಾರಣ ನನಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನನ್ನ ಅಧಿಕಾರ ಪತ್ರದಲ್ಲಿ ಅವರಿಗೆ ಆರಾಮವಿಲ್ಲವೆಂದು ಬರೆಸಿಲ್ಲ ಎಂದರೆ ಸರಿಯಲ್ಲ.
2. ನನ್ನ ತಂದೆಯು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದರೆ ಸತ್ಯ ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯಲು ನಾನು ಅಧಿಕಾರ ಪತ್ರ ಪಡೆದು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ.
3. ತಿಪ್ಪಣ್ಣ ರಾಮಣ್ಣ ಪಾಂಡ್ರೆ ರವರು ನನ್ನ ದೊಡ್ಡಪ್ಪನಾಗಬೇಕು. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ನಡುವೆ ವಿಭಾಗ ಆಗಿದೆ ಎಂದರೆ ಸರಿ. ವಿಭಾಗದಲ್ಲಿ ಸರ್ವೆ ನಂ.21/1 ರಲ್ಲಿ 2 ಎಕರೆ 25 ಗುಂಟೆ ಆಸ್ತಿ ಬಂದಿದೆ ಎಂದರೆ ಸರಿ. ನನ್ನ ದೊಡ್ಡಪ್ಪನಾದ ತಿಪ್ಪಣ್ಣ ತಂದೆ ರಾಮಣ್ಣ ಪಾಂಡ್ರೆ ರವರಿಗೆ ಸರ್ವೆ ನಂ.21/2 ರಲ್ಲಿ 2 ಎಕರೆ 6 ಗುಂಟೆ ಜಮೀನು ಹೋಗಿದೆ ಎಂದರೆ ಸರಿ. ನಾವು ನಮ್ಮ ಹಿಸ್ಸಾ ಭಾಗವನ್ನು ಸ್ವತಂತ್ರವಾಗಿ ಉಳುಮೆ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ. ಸದರಿ ಜಮೀನುಗಳು ನಾಲಾ ದಂಡೆಗೆ ಬರುತ್ತವೆ ಎಂದರೆ ಸರಿ.

4. ಪ್ರತಿವಾದಿಯು ನನ್ನ ದೊಡ್ಡಪ್ಪನಾದ ತಿಪ್ಪಣ್ಣ ತಂದೆ ರಾಮಣ್ಣ ಪಾಂಡ್ರೆ ರವರಿಂದ 11 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂಗತಿಯು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ನಾಲಾ ದಂಡೆಗೆ ಇರುವ ಕಾರಣ ಬಾವಿ ತೆಗೆಸುವ ಸಲುವಾಗಿ ಅದನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಜಮೀನು 21/3 ಎಂದು ಪೋಡಿಯಾಗಿದೆ ಎಂದರೆ ಸರಿಯಲ್ಲ.
5. ಸದರಿ ಪಹಣಿಯನ್ನು ನಿಪಿ-2 ರ ರೀತ್ಯಾ ನಾನೇ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2002 ರಲ್ಲಿ ಪ್ರತಿವಾದಿಯು ತನ್ನ 11 ಗುಂಟೆ ಜಮೀನಿನಲ್ಲಿ ಬಾವಿ ತೆಗೆಸಿರುತ್ತಾನೆ ಎಂದರೆ ಸರಿಯಲ್ಲ.
6. ನನ್ನ ಜಮೀನಿನಲ್ಲಿರುವ ಬಾವಿಯ ಸಲುವಾಗಿ ದಾವೆ ದಾಖಲಿಸಿರುತ್ತೇನೆ. ನಾನು ಪ್ರತಿವಾದಿಯ ಜಮೀನಿನಲ್ಲಿರುವ ಬಾವಿಗೆ ಸಂಬಂಧಪಟ್ಟಂತೆ ದಾವೆ ದಾಖಲಿಸಿದ್ದು, ಆತನೇ ಅದನ್ನು ತನ್ನ ಸ್ವಂತ ಹಣದಿಂದ ತೆಗೆಸಿರುತ್ತಾನೆ ಎಂದರೆ ಸರಿಯಲ್ಲ. ಬಾವಿ ತೆಗೆಯಿಸಿದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಮುಂದುವರೆದು ಉತಾರೆಗಳನ್ನು ಕೊಟ್ಟಿರುವುದಾಗಿ ನುಡಿಯುತ್ತಾರೆ.
7. ನಿಪಿ-1 ರಲ್ಲಿ ಬಾವಿಯೆಂದು ನಮೂದಿಸಿಲ್ಲ ಎಂದರೆ ಸರಿ. ಪ್ರತಿವಾದಿಯು ಬಾವಿ ತೆಗೆಸುವ ಸಲುವಾಗಿ 11 ಗುಂಟೆ ಆಸ್ತಿಯನ್ನು ಖರೀದಿಸಿದ್ದು, ಖರೀದಿಸಿದ ನಂತರ ಆತನು ತನ್ನ 11 ಗುಂಟೆ ಜಮೀನಿನಲ್ಲಿ ಬಾವಿ ತೆಗೆಸಿರುತ್ತಾನೆ ಎಂದರೆ ಸರಿಯಲ್ಲ. 2002 ರಿಂದಲೂ ಪ್ರತಿವಾದಿಯು ಸದರಿ ಬಾವಿಯಿಂದ ಜಮೀನಿನಲ್ಲಿ ನೀರಾವರಿ ಉಳುಮೆ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ನಾನು ಬಾವಿಗೆ ನನ್ನ ಹೆಸರಿನಲ್ಲಿ ವಿದ್ಯುಚ್ಛಕ್ತಿ ಸಂಪರ್ಕ ಪಡೆದುಕೊಂಡಿದ್ದು, ಈ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ.

8. ಪ್ರತಿವಾದಿಯು ತನ್ನ ಜಮೀನನ್ನು ಅಳತೆ ಮಾಡಲು ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ತಂದೆಗೂ ಸಹ ಗೊತ್ತಿಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ವಿರುದ್ಧ ಪ್ರತಿವಾದಿಯು ಡಿ.ಡಿ.ಎಲ್.ಆರ್. ವಿಜಯಪುರ ಇಲ್ಲಿ ಅರ್ಜಿ ದಾಖಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಸಂ : 289/2018 ಆಗಿದ್ದು, ಅದರಲ್ಲಿ ನನ್ನ ತಂದೆ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಅಳತೆ ಮಾಡಿ ಬಾವಿಯು ಪ್ರತಿವಾದಿಯ ಜಮೀನಿನಲ್ಲಿ ಬರುತ್ತದೆ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ಸಂಗತಿ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
9. ಬಾವಿಯು ಪ್ರತಿವಾದಿಗೆ ಸೇರಿದ್ದು, ಅದನ್ನು ನನಗೆ ಸೇರಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಬಾವಿಯನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(ದೇವರಾಜು ಹೆಚ್.ಆರ್.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.